# <u>ನಗರಸಭಾ ಕಾರ್ಯಾಲಯ, ತುಮಕೂರು</u>

ನಂ.ನಸತು:ಶೇ.18/ಟೆಂಡರ್/ಸಿಆರ್/67/2009–10 ದಿನಾಂಕ 29–08–2009

## <u>ಅಲ್ಪಾವಧಿ ಟೆಂಡರ್ ಪ್ರಕಟಣೆ</u>

ತುಮಕೂರು ನಗರಸಭೆಗೆ 2008–09ನೇ ಸಾಲಿಗೆ ಎಸ್.ಎಫ್.ಸಿ ಹಾಗೂ ನಗರಸಭಾ ನಿಧಿಯಲ್ಲಿ ಶೇ. 18ರ ಯೋಜನೆಗೆ ಕಾಯ್ದಿರಿಸಿರುವ ಅನುದಾನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕಂಪ್ಯೂಟರ್ ತರಬೇತಿ ಹಾಗೂ ಭಾರಿ ಹಾಗೂ ಲಘುವಾಹನ ಚಾಲನ ತರಬೇತಿ ಮತ್ತು ಲೈಸನ್ಸ್ ನೀಡಲು ಅರ್ಹ ನೊಂದಾಯಿತ ಸರ್ಕಾರದಿಂದ ಅಂಗೀಕೃತ ಸಂಸ್ಥೆಗಳಿಂದ ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ.

1. ಟೆಂಡರ್ ಫಾರಂ ಬೆಲೆಯೊಂದಿಗೆ ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕ 29–08–2009 ರಿಂದ 14–09–2009ರವರೆಗೆ ಕಛೇರಿ ವೇಳೆಯಲ್ಲಿ ಅರ್ಜಿ ಶುಲ್ಕವನ್ನು ಪಾವತಿ ಮಾಡಿ ಅರ್ಜಿಯೊಂದಿಗೆ ಲಗತ್ತಿಸಿ ಪೌರಾಯುಕ್ತರು, ನಗರಸಭೆ, ತುಮಕೂರು ರವರಿಗೆ ಸಲ್ಲಿಸಬಹುದಾಗಿದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.
2. ಖಾಲಿ ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ 29–08–2009 ರಿಂದ 14–09–2009ರವರೆಗೆ ಕಛೇರಿಯ ವೇಳೆಯಲ್ಲಿ ಅರ್ಹ ಟೆಂಡರ್‌ದಾರರಿಗೆ ಟೆಂಡರ್ ಫಾರಂ ನೀಡಲಾಗುವುದು.
3. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದಿನಾಂಕ 16–09–2009 ರಂದು 4.00 ಗಂಟೆಯೊಳಗಾಗಿ ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಅಥವಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸಬಹುದಾಗಿದೆ.
4. ಟೆಂಡರ್ ಫಾರಂಗಳನ್ನು ಸಾಧ್ಯವಾದರೆ ಅದೇ ದಿನ ಅಥವಾ ಮುಂದಿನ ಕಛೇರಿ ವೇಳೆಯಲ್ಲಿ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು.
5. ಟೆಂಡರ್ ಷರತ್ತುಗಳನ್ನು ಟೆಂಡರ್ ಫಾರಂನಲ್ಲಿ ಹಾಗೂ ತಾಂತ್ರಿಕ ಶಾಖೆಯ ಹಾಗೂ ದಾಸ್ತಾನು ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.
6. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.tumkurcity.gov.in ಹಾಗೂ ನಗರಸಭೆಯ ತಾಂತ್ರಿಕ ಶಾಖೆಯ ಮತ್ತು ದಾಸ್ತಾನು ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

| ಕ್ರ. ಸಂ. | ಸಾಮಗ್ರಿಗಳ ವಿವರ | ಅಂದಾಜು ಮೊತ್ತ (ಲಕ್ಷಗ ಳಲ್ಲಿ) | ಇಎಂಡಿ ಮೊತ್ತ | ಟೆಂಡರ್ ಫಾರಂ ಬೆಲೆ ಹಿಂದಿರುಗಿಸಲಾ ಗುವುದಿಲ್ಲ | ಅರ್ಹ ಸಂಸ್ಥೆಗಳು | ತರಬೇತಿ ಕಾಲಾವಧಿ |
|---|---|---|---|---|---|---|
| 1 | 2 | 3 | 4 | 5 | | |
| 1 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ, ಯುವತಿಯರಿಗೆ ಸ್ವಯಂ ಉದ್ಯೋಗ ಪ್ರವೃತ್ತಿಯನ್ನು ಪ್ರೋತ್ಸಾಹಿಸಲು ಹಾಗೂ ಉದ್ಯೋಗಾವಕಾಶಕ್ಕಾಗಿ ಕಂಪ್ಯೂಟರ್ ತರಬೇತಿ ನೀಡುವುದು. | 8.00 | 20000.00 | 1000+ ತೆರಿಗೆ | ಸರ್ಕಾರದಿಂದ ಅಂಗೀಕೃತ ಸಂಸ್ಥೆಗಳು | 6 ತಿಂಗಳು |
| 2 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಬಾರಿ ಮತ್ತು ಲಘು ವಾಹನದ ಚಾಲನ ತರಬೇತಿ ಮತ್ತು ಲೈಸನ್ಸ್ ನೀಡುವುದು. | 4.00 | 10000.00 | 500+ ತೆರಿಗೆ | ಸರ್ಕಾರದಿಂದ ಅಂಗೀಕೃತ ಸಂಸ್ಥೆಗಳು | 1 ತಿಂಗಳು |

## ಷರತ್ತುಗಳು

1. ಟೆಂಡರ್ ಫಾರಂ ಬೆಲೆಯನ್ನು ನಗದಾಗಿ ನಗರಸಭೆಯ ನಗದು ಶಾಖೆಯಲ್ಲಿ ಪಾವತಿಸಿ ಟೆಂಡರ್ ಫಾರಂ ಪಡೆಯಬಹುದು. ಅರ್ಜಿಯನ್ನು ಸಲ್ಲಿಸುವಾಗ ತರಬೇತಿ ನೀಡುವ ಸಂಸ್ಥೆಯು ಸರ್ಕಾರದಿಂದ ಅಧಿಕೃತ ನೊಂದಣಿ ಪತ್ರ ಸಲ್ಲಿಸುವುದು. ಆದಾಯ ತಿರುವಳಿ ಪತ್ರ ಮತ್ತು ಕನಿಷ್ಠ ಮೂರು ವರ್ಷಗಳ ಆಡಿಟ್ ವರದಿ ಪ್ಯಾನ್ ನಂಬರ್ ನಮೂದಿಸಿ ಲಗತ್ತಿಸತಕ್ಕದ್ದು.
2. ಇಎಂಡಿ ಹಣವನ್ನು ಪೌರಾಯುಕ್ತರು, ನಗರಸಭೆ, ತುಮಕೂರು ಇವರ ಹೆಸರಿಗೆ ಜಮಾ ಮಾಡಬಹುದಾದಂತಹ ಡಿಡಿ / ಎಫ್‌ಡಿಆರ್‌ಗಳನ್ನು ಅಥವಾ ನಗರಸಭಾ ಕಾರ್ಯಾಲಯದಲ್ಲಿ ನಗದು ಜಮಾ ಮಾಡಿ ರಸೀದಿಯೊಂದಿಗೆ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು. **ಎನ್.ಎಸ್.ಸಿ.ಗಳನ್ನು ಸ್ವೀಕರಿಸಲಾಗುವುದಿಲ್ಲ.**
3. ಟೆಂಡರ್ ಫಾರಂನಲ್ಲಿ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
4. ಮೇಲೆ ನಿಗಧಿಪಡಿಸಿರುವ ಯಾವುದೇ ದಿನಾಂಕಗಳು ಸರ್ಕಾರಿ ರಜಾ ದಿನಗಳೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.
5. ನಿಬಂಧನೆಗಳನ್ನು ನಮೂದಿಸಿ ಸಲ್ಲಿಸುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. ಯಾವ ಕಾರಣವನ್ನು ಸಹ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
7. ಮೇಲಿನ ತರಬೇತಿಯಲ್ಲಿ ಏನಾದರೂ ಸೇರ್ಪಡೆ ಅಥವಾ ಮಾರ್ಪಡಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
8. ತರಬೇತಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಸಂಸ್ಥೆಯವರೇ ಒದಗಿಸಿಕೊಳ್ಳತಕ್ಕದ್ದು.
9. ತರಬೇತಿಗೆ ಟೆಂಡರ್ ಸಲ್ಲಿಸುವಾಗ 'ಬಿ' ಷೆಡ್ಯೂಲ್‌ನಲ್ಲಿ ದರಗಳನ್ನು ನಮೂದಿಸುವಾಗ ಸ್ಪಷ್ಟವಾಗಿ ಒಂದೇ ರೀತಿಯ ಬರವಣಿಗೆಯಲ್ಲಿ ಪ್ರತಿ ಪುಟಕ್ಕೂ ಸಹಿಯೊಂದಿಗೆ ಯಾವುದೇ ರೀತಿಯ ವ್ಯತ್ಯಾಸವಾಗದಂತೆ ನಮೂದಿಸಬೇಕು. ಇಲ್ಲವಾದಲ್ಲಿ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.
10. ಈ ತರಬೇತಿಗೆ ಕಾರ್ಯಾದೇಶದ ನೀಡಿದ ದಿನಾಂಕದಿಂದ 7 ದಿನಗಳೊಳಗಾಗಿ ಖಡ್ಡಾಯವಾಗಿ ತರಬೇತಿ ನೀಡಲು ಪ್ರಾರಂಭಿಸತಕ್ಕದ್ದು.
11. ಈ ಯಾವುದಾದರು ಸರ್ಕಾರಿ ಕಛೇರಿಯಲ್ಲಿ ತರಬೇತಿ ನೀಡಿರುವ ಬಗ್ಗೆ ದಾಖಲೆಗಳನ್ನು ಟೆಂಡರ್ ಜೊತೆಯಲ್ಲಿ ಲಗತ್ತಿಸುವುದು.

| | | |
|---|---|---|
| **ಸಹಿ/–** | **ಸಹಿ/–** | **ಸಹಿ/–** |
| **ಅಧ್ಯಕ್ಷರು** | **ಉಪಾಧ್ಯಕ್ಷರು** | **ಪೌರಾಯುಕ್ತರು** |
| **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** |